**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್.ಸಿ. ನ್ಯಾಯಾಲಯ, ಬೇಲೂರು**

**ಅಸಲು ದಾವಾ ನಂ. 86/2019** **ಪಿ ಡಬ್ಲ್ಯೂ :1**

**(ಇಂದು ದಿನಾಂಕಃ 14.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- 8ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಎನ್ ಎಲ್ ರವರಿಂದಃ**

ದಾವಾ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ದಾವಾ ಆಸ್ತಿ ನಂಬರ್ 2 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿ ನಂಬರ್ 2 ಯಾವ ರೀತಿ ಬಂತು ಎಂದರೆ ನನಗೆ ಗೊತ್ತಿಲ್ಲ. 8ನೇ ಪ್ರತಿವಾದಿಗೆ 2ನೇ ಆಸ್ತಿಯನ್ನು ನನ್ನ ಅಣ್ಣ ಕುಮಾರ ಮಾರಾಟ ಮಾಡಿರುತ್ತಾನೆ. ಸದರಿ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ನಿಪಿ-8ರ ಪ್ರಕಾರ ರುಕ್ಮಿಣಿಯವರಿಗೆ ನನ್ನ ಅಣ್ಣಂದಿರಾದ ಆರ್.ಕುಮಾರ್ ಹಾಗೂ ಆರ್ ಬಂಗಾರಿ ಮತ್ತು ಎಂ.ಎಂ ಪದ್ಮ ರವರು ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಅವರು 1ನೇ ಪ್ರತಿವಾದಿ, 2ನೇ ಪ್ರತಿವಾದಿಯ ಗಂಡ ಮತ್ತು 3 ಮತ್ತು 4ನೇ ಪ್ರತಿವಾದಿಯ ತಂದೆ ಎಂದರೆ ಸರಿ. ಎಂ.ಎಂ ಪದ್ಮ ರವರು ಈಗ ಬದುಕಿರುತ್ತಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ನನಗೆ ಮಾರಾಟ ಮಾಡಿದ ಬಗ್ಗೆ 2019 ರಲ್ಲಿ ಪ್ರಕರಣ ದಾಖಲು ಮಾಡಿದಾಗ ಗೊತ್ತಾಗಿರುತ್ತದೆ. ಅದಕ್ಕಿಂತ ಮೊದಲು ನಾನು ಮುನಿಸಿಪಾಲಿಟಿಯಲ್ಲಿ ತಕರಾರು ಅರ್ಜಿ ಸಲ್ಲಿಸಿರುವುದಿಲ್ಲ. ದಾವಾ ಅನುಸೂಚಿ 2 ಆಸ್ತಿ 8ನೇ ಪ್ರತಿವಾದಿಗೆ ಮಾರಾಟ ಮಾಡುವ ಮೊದಲು ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ನನ್ನ ತಂದೆಯ ಹೆಸರಿನಲ್ಲಿತ್ತು ಎಂದು ಉತ್ತರಿಸುತ್ತಾರೆ. ಸದರಿ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ಯಾವ ವರ್ಷದಿಂದ ಯಾವ ವರ್ಷದವರೆಗೆ ಇತ್ತು ಎಂದು ದಾಖಲೆ ತೆಗೆದು ನೋಡಿರುವುದಿಲ್ಲ. ದಾವಾ ದಾಖಲು ಮಾಡುವ ಮೊದಲು ಹಳೆ ದಾಖಲೆಗಳನ್ನು ಪುರಸಭೆಯಿಂದ ತಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು, ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**